## <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 30.07.2016 ರಂದು ಪೂರ್ವಾಹ್ನ ಗಂಟೆ 2.30ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2016ನೇ ಸಾಲಿನ ಐದನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**I ನಡಾವಳಿಗಳ ದೃಢೀಕರಣ**

ದಿನಾಂಕ 21.06.2016ರಂದು ನಡೆದ 2016ನೇ ಸಾಲಿನ ನಾಲ್ಕನೆಯ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಕೆಳಗಿನ ತಿದ್ದುಪಡಿಗಳೊಂದಿಗೆ ದೃಢೀಕರಿಸಲಾಯಿತು.

ನಡಾವಳಿಯ ಪ್ರಸ್ತಾವಿಕ ಕ್ರ.ಸಂ.3ರಲ್ಲಿ ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸಲಹೆ ಮತ್ತು ನಿರ್ಣಯದಂತೆ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತುರ್ತು ಸಂದರ್ಭಗಳಲ್ಲಿ ಕಾಲೇಜಿಗೆ ಸಂಬಂಧಿಸಿದ ಕೆಲಸ ಕಾರ್ಯಗಳಿಗೆ ರೂ.10,000/-ದವರೆಗೆ ತಗಲುವ ವೆಚ್ಚವನ್ನು ಭರಿಸಿಕೊಳ್ಳುವ ಅಧಿಕಾರವನ್ನು ನೀಡಲು ತೀರ್ಮಾನಿಸಲಾಯಿತು ಮತ್ತು ಸದರಿ ಖರ್ಚುವೆಚ್ಚದ ವಿವರಗಳನ್ನು ವಿಶ್ವವಿದ್ಯಾನಿಲಯಕ್ಕೆ ನಿಗದಿತ ನಮೂನೆಯಲ್ಲಿ ಸಲ್ಲಿಸುವಂತೆ ತಿಳಿಸಲು ತೀರ್ಮಾನಿಸಲಾಯಿತು.

**1.ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:9(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಯುಜಿಸಿ, ಡಿಎಸ್‌ಟಿ ಮತ್ತು ಕೇಂದ್ರ ಸರ್ಕಾರದ ಅನುದಾನ /ಇತರ ಪ್ರಸ್ತಾವನೆಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮ (Follow up action) ಗಳಿಗಾಗಿ ದೆಹಲಿಯಲ್ಲಿ "Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ :** ನವದೆಹಲಿಯಲ್ಲಿ ವಿಶ್ವವಿದ್ಯಾನಿಲಯ ಪರವಾಗಿ UGC, DST ಮತ್ತು ಕೇಂದ್ರ ಸರ್ಕಾರದ ಅನುದಾನ/ಇತರ ಪ್ರಸ್ತಾವನೆಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮಗಳಿಗಾಗಿ Liaison Officer ಆಗಿ ಸೇವೆ ಸಲ್ಲಿಸುತ್ತಿರುವ ಇವರಿಗೆ ಈಗ ನೀಡುತ್ತಿರುವ ಗೌರವಧನ ರೂ.20,000/-ಗಳನ್ನು ಹೆಚ್ಚಿಸಲು ಕೋರಿರುವ ಪ್ರಸ್ತಾವನೆಯನ್ನು ಚರ್ಚಿಸಿ ಈಗ

ಪಾವತಿಸುತ್ತಿರುವ ಮಾಸಿಕ ರೂ.20,000/- ಗೌರವಧನವನ್ನೇ ಮುಂದಿನ ಆದೇಶದವರೆಗೆ ಮುಂದುವರಿಸಲು ತೀರ್ಮಾನಿಸಲಾಯಿತು. ಸದರಿಯವರ ಕಾರ್ಯಚಟುವಟಿಕೆಗಳ ಬಗ್ಗೆ ಅವರಿಂದ ತಿಂಗಳಿಗೊಮ್ಮೆ ವರದಿ ಪಡೆದ ನಂತರವೇ ಗೌರವಧನ ಪಾವತಿಸಲು ಕೂಡಾ ತೀರ್ಮಾನಿಸಲಾಯಿತು.

**2.ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ.4:10(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕರ್ನಾಟಕ ಸರಕಾರದ ಅನುದಾನ/ಪ್ರಸ್ತಾವನೆ ಹಾಗೂ ಇತರ ಕೆಲಸ ಕಾರ್ಯಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮಗಳಿಗಾಗಿ ಬೆಂಗಳೂರಿನಲ್ಲಿ Liaison Officer" ಒಬ್ಬರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಕರ್ನಾಟಕ ಸರ್ಕಾರದ ಅನುದಾನ/ಪ್ರಸ್ತಾವನೆ ಹಾಗೂ ಇತರ ಕೆಲಸ ಕಾರ್ಯಗಳ ತ್ವರಿತ ವಿಲೇವಾರಿ/ಅನುಸರಣಾ ಕ್ರಮಗಳಿಗಾಗಿ ಬೆಂಗಳೂರಿನಲ್ಲಿ Liaison Officer ಆಗಿ ಸೇವೆ ಸಲ್ಲಿಸುತ್ತಿರುವ ಇವರಿಗೆ ಈಗ ನೀಡುತ್ತಿರುವ ಗೌರವಧನ ರೂ.15,000/- ಗಳನ್ನು ಹೆಚ್ಚಿಸಲು ಕೋರಿರುವ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಚರ್ಚಿಸಿ ಈಗ ಪಾವತಿಸುತ್ತಿರುವ ಗೌರವಧನವನ್ನೇ ಮುಂದಿನ ಆದೇಶದವರೆಗೆ ನೀಡಲು ತೀರ್ಮಾನಿಸಲಾಯಿತು. ಹಾಗೆಯೇ ಸದರಿಯವರ ಕಾರ್ಯ ಚಟುವಟಿಕೆಗಳ ಬಗ್ಗೆ ವರದಿ ಪಡೆದ ನಂತರವೇ ಗೌರವಧನ ಪಾವತಿಸಲು ಕೂಡಾ ತೀರ್ಮಾನಿಸಲಾಯಿತು.

**3.ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ.4:25(2016)

**ವಿಷಯ :** ಡಾ.ಟಿ.ಜಯಪ್ರಕಾಶ್ ರಾವ್, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ನಿರ್ಣಯ :** ಕ್ರ.ಸಂ.3ರ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಆಯ್ಕೆ ಆಧಾರಿತ ಶ್ರೇಯಾಂಕ ಪದ್ಧತಿಯಂತೆ, 2 ವರ್ಷಗಳ ಸ್ನಾತಕೋತ್ತರ ಕೋರ್ಸುಗಳ ಪ್ರಾಜೆಕ್ಟ್ ವರ್ಕ್‌ನಲ್ಲಿ ಮೌಖಿಕ ಪರೀಕ್ಷೆಗಳನ್ನು (Viva) ಎಲ್ಲಾ ಸ್ನಾತಕೋತ್ತರ ವಿಭಾಗಗಳಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳುವುದು ಹಾಗೂ ಇಡೀ ಸೆಮಿಸ್ಟರ್ ಪಾಜೆಕ್ಟ್ ವರ್ಕ್ ಆಗಿದ್ದರೆ ಅದರ ಮೌಖಿಕ ಪರೀಕ್ಷೆಗೆ ಬಾಹ್ಯ

ವಿಷಯ ತಜ್ಞರನ್ನು ಸಮಿತಿಯಲ್ಲಿ ಒಳಗೊಳ್ಳುವಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

II ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 23.04.2016ರಂದು ನಡೆದ 2016ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

2. ದಿನಾಂಕ 03.05.2016 ರಂದು ನಡೆದ ಸಿಂಡಿಕೇಟಿನ 2016ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು

ಕಾರ್ಯಸೂಚಿ ಸಂಖ್ಯೆ : ಪರೀಕ್ಷಾಂಗ ಸಾ.ಸ 5:1(2016)

ವಿಷಯ : ಪಿಹೆಚ್.ಡಿ. ಪದವಿ ಪ್ರದಾನ ಬಗ್ಗೆ

ಸಭೆಯ ದಿನಾಂಕ: **30.07.2016**

ನಿರ್ಣಯ : ಅನುಮೋದಿಸಲಾಯಿತು. ಇನ್ನು ಮುಂದೆ ತಾತ್ಕಾಲಿಕವಾಗಿ ಪಿಹೆಚ್.ಡಿ. ಪದವಿ ಪ್ರದಾನ ಮಾಡುವ ಮೊದಲು ಸಿಂಡಿಕೇಟಿನ ಅವಗಾಹನೆ ಮತ್ತು ಅನುಮೋದನೆಗೆ ಮಂಡಿಸುವಂತೆ ನಿರ್ಧರಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಆಡಳಿತ ಸಾ.ಸ5:2(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜು/ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ಅಗತ್ಯವಿರುವ Video Conference System ಉಪಕರಣವನ್ನು ಖರೀದಿಸುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : Video Conference Systemನ್ನು DGS &D ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ5:3(2016)

**ವಿಷಯ :** ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿಗೆ ಎರಡು ಹೊಸ ಜೆರಾಕ್ಸ್ ಯಂತ್ರಗಳನ್ನು ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಆಡಳಿತ ಕಟ್ಟಡದಲ್ಲಿರುವ ಹಳೆಯ ಜೆರಾಕ್ಸ್ ಯಂತ್ರವನ್ನು ದುರಸ್ತಿಗೊಳಿಸಿ ಅದನ್ನು ಚಿಕ್ಕ ಅಳುವಾರಕ್ಕೆ ಒದಗಿಸಿಕೊಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ5:4(2016)

**ವಿಷಯ :** Contribution to STEMPFEST 2016 : reg.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ5:5(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ಎ. ಜೆ. ಹಾಸ್ಪಿಟಲ್ ಮತ್ತು ರಿಸರ್ಚ್ ಸೆಂಟರ್ ಮಧ್ಯೆ ಮಾಡಿಕೊಳ್ಳುವ ಒಡಂಬಡಿಕೆ ಪತ್ರದ ಅನುಮೋದನೆ ಕುರಿತು.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:6(2016)

**ವಿಷಯ :** ಸ್ವಾಯತ್ತ ಕಾಲೇಜುಗಳನ್ನು ಪರಿಶೀಲಿಸುವ ಕುರಿತು.

**ಸಭೆಯ ದಿನಾಂಕ: 30.07.2016**

ನಿರ್ಣಯ : ಡಾ.ಎಸ್.ಎನ್.ಹೆಗ್ಡೆ ಇವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಸಮಿತಿಯು ಸ್ವಾಯತ್ತ ಕಾಲೇಜುಗಳಿಗೆ ಭೇಟಿ ನೀಡಿ ಸ್ವಾಯತ್ತತೆಯು ಹೇಗೆ ಜಾರಿಗೊಳ್ಳುತ್ತಿದೆ ಎಂಬ ಕುರಿತು ಸಲ್ಲಿಸಿರುವ ವರದಿ ಬಗ್ಗೆ ಸಿಂಡಿಕೇಟು ಸಭೆಯು ಕೂಲಂಕುಷವಾಗಿ ಚರ್ಚೆಯನ್ನು ನಡೆಸಿ, ಸಮಿತಿಯು ವ್ಯಕ್ತಪಡಿಸಿರುವ ಒಟ್ಟು ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗದೆಂದು ಅಭಿಪ್ರಾಯ ವ್ಯಕ್ತಪಡಿಸಿತು. ಈ ಹಿನ್ನೆಲೆಯಲ್ಲಿ ಸದರಿ ವರದಿಯಲ್ಲಿರುವ ಅಭಿಪ್ರಾಯ ಮತ್ತು ಶಿಫಾರಸ್ಸುಗಳನ್ನು ಪರಿಶೀಲಿಸಲು ಸಿಂಡಿಕೇಟು ಸಭೆಯು ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಸ್ಥಾಯಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

1. ಎಲ್ಲಾ ನಿಕಾಯಗಳ ಡೀನರುಗಳು
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ
3. ಕುಲಸಚಿವರು
4. ಕುಲಸಚಿವರು (ಪರೀಕ್ಷಾಂಗ) ಮತ್ತು ಅವರ ಪ್ರತಿನಿಧಿಗಳು
5. ಡಾ. ಕೆ. ಸುಂದರ ನಾಯಕ್
6. ಶ್ರೀ ಕೆ. ಮೋಹನಚಂದ್ರನ್ ನಂಬಿಯಾರ್
7. ಶ್ರೀ ಎಂ. ಪಿ. ನರೊನಾ
8. ಸ್ವಾಯತ್ತ ಕಾಲೇಜುಗಳ ಪ್ರತಿನಿಧಿಗಳು

ಮೇಲೆ ತಿಳಿಸಿರುವ ಸಮಿತಿಯ ಅಭಿಪ್ರಾಯಗಳ ಕುರಿತು ಸೂಕ್ತ ಕಾರ್ಯಗಾರ ನಡೆಸಿ, ಅಲ್ಲಿ ಮೂಡಿ ಬರುವ ಅಭಿಪ್ರಾಯ/ಶಿಫಾರಸ್ಸುಗಳ ಆಧಾರದಲ್ಲಿ ಮುಂದಿನ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:7(2016)

**ವಿಷಯ :** ಗೌರವ ಡಾಕ್ಟರೇಟ್ ಪದವಿ ಪ್ರದಾನಕ್ಕೆ ಸಂಬಂಧಿಸಿದಂತೆ ಪರಿನಿಯಮದ ತಿದ್ದುಪಡಿ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಎಸಿಸಿ ಸಾ.ಸ5:8(2016)

**ವಿಷಯ :** “ಬಿಎಂಎಸ್ ರಿಸರ್ಚ್ ಆಂಡ್ ಡೆವಲಪ್‌ಮೆಂಟ್ ಸೆಂಟರ್ "[BMSRD]" ಬೆಂಗಳೂರು ಕೇಂದ್ರವನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ಮಾಡುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಬ್ಬಂದಿ ಸಾ.ಸ5:9(2016)

**ವಿಷಯ :** ದಿವಂಗತ ಡಾ. ಕೆ. ಕೆ. ವಿಜಯಲಕ್ಷ್ಮಿ, ಪ್ರಾಧ್ಯಾಪಕರು, ಮಂಗಳೂರು ವಿಶ್ವವಿದ್ಯಾನಿಲಯ ಇವರ ಸೇವಾ ತಡೆ ಇರುವ ಹಂಗಾಮಿ ನೆಲೆಯ ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸದರಿಯವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ ಹಂಗಾಮಿ ನೆಲೆಯ ಸೇವೆಗಳ ನಡುವೆ ಇರುವ ಸೇವಾ ತಡೆಯನ್ನು ಮನ್ನಾ ಮಾಡುವ ಬಗ್ಗೆ ಹಾಗೂ ಸದರಿ ಹಂಗಾಮಿ ನೆಲೆಯ ಒಟ್ಟು ಸೇವೆಯನ್ನು ಪಿಂಚಣಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ ಚರ್ಚೆ ನಡೆದು, ಇದು ದೂರಗಾಮಿ ಪರಿಣಾಮ ಬೀರುವ ಸಾಧ್ಯತೆಗಳಿರುವುದರಿಂದ ಸದರಿ ವಿಷಯದ ಬಗ್ಗೆ ಕಾನೂನು ಘಟಕದ ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಬ್ಬಂದಿ ಸಾ.ಸ5:10(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕಾರಿ ಅಭಿಯಂತರರ ನೇಮಕ – ಘಟನೋತ್ತರ ಅನುಮೋದನೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ :ಸಿಬ್ಬಂದಿ ಸಾ.ಸ5:11(2016)

ವಿಷಯ : ಕೆರಿಯರ್ ಅಡ್ವಾನ್‌ಮೆಂಟ್ ಸ್ಕೀಂ ಪ್ರಕಾರ ಪ್ರವಾಚಕರ ಹುದ್ದೆಯಿಂದ ಪ್ರಾಧ್ಯಾಪಕರಾಗಿ ಸ್ಥಾನೀಕರಣ ನೀಡುವ ಬಗ್ಗೆ – ಸಂಶೋಧನಾ ಪ್ರಕಟಣೆಗಳ ಮೌಲ್ಯಮಾಪನಕ್ಕೆ ಪರಿಣಿತರ ನೇಮಕ ಕುರಿತು.

ಸಭೆಯ ದಿನಾಂಕ: **30.07.2016**

ನಿರ್ಣಯ : ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ :ಸಿಬ್ಬಂದಿ ಸಾ.ಸ5:12(2016)

ವಿಷಯ : ಡಾ. ಟಿ. ಎನ್. ಶ್ರೀಧರ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ವ್ಯವಹಾರ ಆಡಳಿತ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ದಿನಾಂಕ 26.07.2016 ರಿಂದ 31.07.2016 ರ ವರೆಗೆ Kampong Thom, Cambodia ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಮೇಲ್ಕಾಣಿಸಿದ ಕಾರ್ಯಗಾರದಲ್ಲಿ ಭಾಗವಹಿಸಲು ಅನುಮತಿ ಮತ್ತು ದಿನಾಂಕ 26.07.2016 ರಿಂದ 02.08.2016ರವರೆಗೆ ಅಧಿಕೃತ ಕಾರ್ಯನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಸಿಬ್ಬಂದಿ ಸಾ.ಸ5:13(2016)

ವಿಷಯ : 2016–17ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಿಸಲಾಗಿರುವ ಎಂ.ಎಡ್ ಕೋರ್ಸ್ ಸಂಯೋಜಕರ ನೇಮಕಾತಿ – ಸಂಭಾವನೆ ಹಾಗೂ ಸೇವಾ ಸೌಲಭ್ಯಗಳನ್ನು ನಿಗದಿಪಡಿಸುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಶ್ರೀಮತಿ ಡಾ.ಶಶಿಕಲಾ ಇವರನ್ನು ಕೋರ್ಸಿನ ಸಲಹೆಗಾರ (Course Advisor) ರನ್ನಾಗಿ ನೇಮಕ ಮಾಡಿಕೊಳ್ಳುವುದು ಹಾಗೂ ಸಂಯೋಜಕರ ನೇಮಕಾತಿಗೆ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:14(2016)

**ವಿಷಯ :** ಶ್ರೀಮತಿ ಪವಿತ್ರ ವಿ., ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ, ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇವರ ಪರವೀಕ್ಷಣಾವಧಿಯನ್ನು ಘೋಷಿಸುವ ಬಗ್ಗೆ.

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:15(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಸ್ನಾತಕೋತ್ತರ ಟೂರಿಸಂ ಆ್ಯಂಡ್ ಟ್ರಾವೆಲ್ ಮ್ಯಾನೇಜ್‌ಮೆಂಟ್ (T.T.M.) ವಿಭಾಗ ಸ್ಥಾಪನೆ ಹಾಗೂ ಹುದ್ದೆಗಳ ಸೃಜನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:16(2016)

**ವಿಷಯ :** ಅಡುಗೆಗಾರ / ಸಹಯಕ ಅಡುಗೆಗಾರ (ಹಾಸ್ಟೆಲ್ / ಅತಿಥಿಗೃಹ) ಮತ್ತು ಕಿಚನ್ ಅಸಿಸ್ಟೆಂಟ್ / ಹಾಸ್ಟೆಲ್ ಅಸಿಸ್ಟೆಂಟ್ ಹುದ್ದೆಗಳಿಗೆ ಸಂಬಂಧಿಸಿದ ವೃಂದ ಹಾಗೂ ನೇಮಕಾತಿ ನಿಯಮಗಳನ್ನೊಳಗೊಂಡ ಕರಡು ಅನುಶಾಸನ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ5:17(2016)

**ವಿಷಯ :** ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಅತಿಥಿಗೃಹಗಳು ಮಂಗಳೂರು ವಿಶ್ವವಿದ್ಯಾನಿಲಯದ ಜೊತೆ ಮಾಡಿಕೊಳ್ಳ ಬಯಸಿದ ಒಡಂಬಡಿಕೆಗಳ ಅನುಮೋದನೆ ಕುರಿತು.

**ಸಭೆಯ ದಿನಾಂಕ: 30.07.2016**

ನಿರ್ಣಯ : ಸದರಿ ಕರಡು ಒಡಂಬಡಿಕೆಗಳಲ್ಲಿ ನಮೂದಿಸಿರುವ Licence fee ಪದದ ಬದಲು Rent ಪದವನ್ನು ಬಳಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟು ಈ ಕರಾರು ಒಪ್ಪಂದವನ್ನು ಮರು ಪರಿಶೀಲಿಸಲು ಕಾನೂನು ಘಟಕದ ಅಭಿಪ್ರಾಯ ಪಡೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:18(2016)

**ವಿಷಯ :** ಪದವಿ ಮತ್ತು ಸ್ನಾತಕೋತ್ತರ ಸೂಕ್ಷ್ಮಾಣುಜೀವ ವಿಜ್ಞಾನ ಸಂಯುಕ್ತ ಅಧ್ಯಯನ ಮಂಡಳಿಯ ಪುನರ್‍ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್‍ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:19(2016)

**ವಿಷಯ :** ಸ್ನಾತಕೋತ್ತರ ಆನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‍ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್‍ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:20(2016)

**ವಿಷಯ :** ಪದವಿ ಮತ್ತು ಸ್ನಾತಕೋತ್ತರ ಬಯೋಟೆಕ್ನಾಲಜಿ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‍ರಚಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್‍ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಂಡಿಕೇಟು ಸಾ.ಸ5:21(2016)

**ವಿಷಯ :** ಸ್ನಾತಕೋತ್ತರ ಆನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಂಡಿಕೇಟು ಸಾ.ಸ5:22(2016)

**ವಿಷಯ :** ಸ್ನಾತಕೋತ್ತರ ಇತಿಹಾಸ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಂಡಿಕೇಟು ಸಾ.ಸ5:23(2016)

**ವಿಷಯ :** ಸ್ನಾತಕೋತ್ತರ ವಸ್ತುವಿಜ್ಞಾನ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:24(2016)

**ವಿಷಯ :** ಎಂ. ಕಾಂ. (ಹೆಚ್.ಆರ್.ಡಿ.) ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ

ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :**ಸಿಂಡಿಕೇಟು ಸಾ.ಸ5:25(2016)

**ವಿಷಯ :** ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:26(2016)

**ವಿಷಯ :** ಶ್ರೀ ಪ್ರಸನ್ನ ಕುಮಾರ್ ರೈ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ತಿಳುವಳಿಕೆ ಪತ್ರವನ್ನು ಸಿದ್ಧಪಡಿಸುವ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಯಿತು ಹಾಗೂ ಎರಡು ಸಂಸ್ಥೆಗಳ ಮಧ್ಯೆ ಒಡಂಬಡಿಕೆಯನ್ನು ತಯಾರಿಸುವ ಜವಾಬ್ದಾರಿಯನ್ನು ಶ್ರೀ ಪ್ರಸನ್ನ ಕುಮಾರ ರೈ, ಸಿಂಡಿಕೇಟು ಸದಸ್ಯರು ಇವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಂಡಿಕೇಟು ಸಾ.ಸ5:27(2016)

**ವಿಷಯ :** ಡಾ. ಕಿಶೋರ್ ಕುಮಾರ್ ಸಿ. ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆಗಳು

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸಹಾಯಕ ಪ್ರಾಧ್ಯಾಪಕರ ವೇತನ ಶ್ರೇಣಿಯಲ್ಲಿ ವೃತ್ತಿಪರ ಸಾರ್ವಜನಿಕ ಸಂಪರ್ಕ ಅಧಿಕಾರಿ ಒಬ್ಬರನ್ನು ನೇಮಕಾತಿ ಮಾಡಿಕೊಳ್ಳುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪ.ಜಾ.ಪ.ಪಂ.ಘಟಕ ಸಾ.ಸ5:28(2016)

ವಿಷಯ : ಸರಕಾರದಿಂದ 2015–16ನೇ ಸಾಲಿಗೆ SCP – TSP ಯೋಜನೆಯಡಿಯಲ್ಲಿ ಮಂಜೂರಾಗಿರುವ ಅನುದಾನದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ / ಪಂಗಡದ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿತರಿಸಲು ಲ್ಯಾಪ್‌ಟಾಪ್ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಖರೀದಿ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು ಹಾಗೂ ಖರೀದಿ ವೆಚ್ಚ ರೂ.47,60,000/– ಮತ್ತು ಇತರ ವೆಚ್ಚಗಳ ಮಂಜೂರಾತಿಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ5:29(2016)

ವಿಷಯ : ವಿಶ್ವವಿದ್ಯಾನಿಲಯ ಗೀತೆ ರಚನೆ ಆಯ್ಕೆ ಸಮಿತಿ ಸಭೆಯ ನಡಾವಳಿಯ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡೀಇವಿ ಸಾ.ಸ5:30(2016)

ವಿಷಯ : 2016–17ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ / ಘಟಕ ಕಾಲೇಜುಗಳಿಗೆ ರಾಸಾಯನಿಕಗಳು / ಗ್ಲಾಸ್‌ವೇರ್ / ಬಳಕೆಯ ವಸ್ತುಗಳನ್ನು ಪೂರೈಕೆಗೆ ಧಾರಣಾಗುತ್ತಿಗೆ ಆಧಾರದಲ್ಲಿ ಸರಬರಾಜು ಮಾಡಲು ಸಂಸ್ಥೆಗಳ ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:31(2016)

**ವಿಷಯ :** ಆಳ್ವಾಸ್ ಕಾಲೇಜ್ ಆಫ್ ಎಜ್ಯುಕೇಶನ್, ಮೂಡಬಿದಿರೆ ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಎಂ. ಎಡ್. ಕೋರ್ಸಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸ್ಥಳೀಯ ವಿಚಾರಣಾ ಸಮಿತಿಯು ಸದರಿ ಕೋರ್ಸಿಗೆ 50 ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ, ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:32(2016)

**ವಿಷಯ :** ಆಳ್ವಾಸ್ ಕಾಲೇಜ್ ಆಫ್ ಫಿಸಿಕಲ್ ಎಜ್ಯುಕೇಶನ್, ಮೂಡಬಿದಿರೆ ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ಎಂ.ಪಿ.ಎಡ್. ಕೋರ್ಸಿನ ಸಂಯೋಜನಾ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸ್ಥಳೀಯ ವಿಚಾರಣಾ ಸಮಿತಿಯು ಸದರಿ ಕೋರ್ಸಿಗೆ 40 ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ, ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:33(2016)

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೆಳ್ತಂಗಡಿ ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸ್ಥಳೀಯ ವಿಚಾರಣಾ ಸಮಿತಿಯು ಎಂ.ಎ. ಕನ್ನಡ ಕೋರ್ಸಿನ ಸಂಯೋಜನೆಗೆ ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ 20 ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿಸ್ತರಣಾ ಸಂಯೋಜನೆ ಅನುಮೋದನೆ ನೀಡಿರುತ್ತದೆ. ಆದರೆ ಎಂ.ಎ ರಾಜ್ಯಶಾಸ್ತ್ರ ಕೋರ್ಸಿಗೆ ವಿಸ್ತರಣಾ ಸಂಯೋಜನೆಗೆ ಸರ್ಕಾರಿ ಆದೇಶವಿರುವುದರಿಂದ ಸದರಿ ಸಂಸ್ಥೆಗೆ ಕಲಾ ನಿಕಾಯದ ಡೀನರು ಹಾಗೂ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾದ ಡಾ.ರಾಜರಾಮ್ ತೋಲ್ಪಾಡಿ ಇವರನ್ನೊಳಗೊಂಡ ಸಮಿತಿಯನ್ನು ಪುನರ್ ಪರಿಶೀಲನೆಗೆ ಕಳುಹಿಸುವುದೆಂಬುದಾಗಿ ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಎಸಿಸಿ ಸಾ.ಸ5:34(2016)

**ವಿಷಯ :** ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುನಿಯಾಲು, ಕಾರ್ಕಳ ಎಂಬ ವಿದ್ಯಾಸಂಸ್ಥೆಗೆ ಶೈಕ್ಷಣಿಕ ವರ್ಷ 2016–17ನೇ ಸಾಲಿಗೆ ವಿಸ್ತರಣಾ ಸಂಯೋಜನಾ ಮಂಜೂರಾತಿ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಸ್ಥಳೀಯ ವಿಚಾರಣಾ ಸಮಿತಿಯು ಶಿಫಾರಸ್ಸು ಮಾಡಿರುವ ವಿದ್ಯಾರ್ಥಿ ಪರಿಮಿತಿಯೊಂದಿಗೆ ವಿಸ್ತರಣಾ ಸಂಯೋಜನೆ ನೀಡಬಹುದೆಂಬುದಾಗಿ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ, ಶೈಕ್ಷಣಿಕ ಮಂಡಳಿಯು ಮಾಡಿರುವ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಹವಿ ಸಾ.ಸ5:35(2016)

**ವಿಷಯ :** 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:36(2016)

**ವಿಷಯ :** Repair works to the USIC & Electronics Departments at Mangalore University Mangalagangothri– ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:37(2016)

**ವಿಷಯ :** ಮಂಗಳೂರು ವಿದ್ಯಾನಿಲಯ ಅಧೀನಕ್ಕೆ ಒಳಪಟ್ಟಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಹಳೆಯ ಸೂಕ್ಮಾಣು ಜೀವ ವಿಜ್ಞಾನ ವಿಭಾಗ ಕಟ್ಟಡದಲ್ಲಿ ಹೊಸತಾಗಿ ಪ್ರಾರಂಭಗೊಂಡ ವಿವಿಧ ವಿಭಾಗಗಳ ಉಪನ್ಯಾಸ ಕೊಠಡಿ ಕಚೇರಿಗಳಿಗೆ ವಿದ್ಯುದ್ದೀಕರಣ ನವೀಕರಿಸುವುದು – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:38(2016)

**ವಿಷಯ :** ಫೀ.ಮಾ.ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಕಾಲೇಜಿನ ರಸಾಯನಶಾಸ್ತ್ರ ಪ್ರಯೋಗಾಲಯ ನವೀಕರಣ ಕಾಮಗಾರಿ – ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:39(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿದೇಶಿ ವಿದ್ಯಾರ್ಥಿಗಳು ವಾಸವಾಗಿರುವ ಹಾಸ್ಟೆಲ್‌ಗಳಿಗೆ (ಪ್ಲಾಮಾ ದೇರಳಕಟ್ಟೆ) 9 ಸಂಖ್ಯೆ ಹವಾನಿಯಂತ್ರಕಗಳನ್ನು ಅಳವಡಿಸುವುದು–ಟೆಂಡರು ಅನುಮೋದನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:40(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ನೀರು ಶುದ್ಧೀಗಾರಕ್ಕೆ ಇರುವ Approach roadಗೆ ಇಂಟರ್‌ಲಾಕ್‌ಅಳವಡಿಸುವ ಬಗ್ಗೆ.

ಅಂದಾಜು ಮೊತ್ತ ರೂ. 6.50 ಲಕ್ಷ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ5:41(2016)

ವಿಷಯ : Construction of Dr. B.R. Ambedkar Bhavana at Mangalore University Campus, Mangalagangothri.

ಅಂದಾಜು ಮೊತ್ತ ರೂ. 9.60 ಕೋಟಿ

ಸಭೆಯ ದಿನಾಂಕ: **30.07.2016**

ನಿರ್ಣಯ : ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ5:42(2016)

ವಿಷಯ : ಮಾಹಿತಿ ತಂತ್ರಜ್ಞಾನ ಕಟ್ಟಡ ಸಂಕೀರ್ಣ ನಿರ್ಮಾಣದ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ5:43(2016)

ವಿಷಯ : Providing and laying Ductile Iron Pipe in between Treatment Plant Konaje to Mudipu cross (excluding Infosys front portion of length 750 mtrs) pertaining to major water supply line of Mangalore University Mangalagangothri.– ಟೆಂಡರು ಅನುಮೋದನೆ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ : ಇಡಿ ಸಾ.ಸ5:44(2016)

ವಿಷಯ : Construction of Office Annex at Mangalore University, Mangalagangothri

ಅಂದಾಜು ಮೊತ್ತ ರೂ. 32.00 ಕೋಟಿ

ಸಭೆಯ ದಿನಾಂಕ: **30.07.2016**

ನಿರ್ಣಯ : ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:45(2016)

**ವಿಷಯ :** Construction of Pareeksha Bhavan at Mangalore University, Mangalagangothri

ಅಂದಾಜು ಮೊತ್ತ ರೂ. 32.00 ಕೋಟಿ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:46(2016)

**ವಿಷಯ :** Construction of Record Room at the Administrative block Mangalore University, Mangalagangothri.

ಅಂದಾಜು ಮೊತ್ತ ರೂ. 4.32 ಕೋಟಿ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ರೂ.4.32 ಕೋಟಿ ಮೊತ್ತದ Line estimateನ್ನು ಪುನರ್ ಪರಿಶೀಲಿಸಿ ಲೋಕೋಪಯೋಗಿ ಇಲಾಖಾ ದರಪಟ್ಟಿ 2015–16ರಂತೆ ರೂ.2.0ಕೋಟಿ ಮೊತ್ತಕ್ಕೆ ನಿಗದಿಪಡಿಸಿ ಮರು ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:47(2016)

**ವಿಷಯ :** Renovation of Raveendra Kala Bhavana, University College, Mangalore

ಅಂದಾಜು ಮೊತ್ತ ರೂ. 3,58,96,775.93

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಲೋಕೋಪಯೋಗಿ ಇಲಾಖೆ ದರಪಟ್ಟಿ 2015–16ರ ಸಾಲಿನಂತೆ ಅಂದಾಜು ಮೊತ್ತವನ್ನು ರೂ.2.50 ಕೋಟಿಗೆ ನಿಗದಿಪಡಿಸಿ ತಯಾರಿಸಲು ನಿರ್ಣಯಿಸಲಾಯಿತು. ಅಂದಾಜು ವೆಚ್ಚವನ್ನು ಪರಿಶೀಲಿಸಿ ಕ್ರಮಕೈಗೊಳ್ಳಲು ಹಾಗೂ ಇದಕ್ಕೆ ಸಂಬಂಧಿಸಿದ ರೂಪು ರೇಷೆಗಳ ಬಗ್ಗೆ ಚರ್ಚಿಸಲು ಡಾ.ಸುಂದರ್ ನಾಯ್ಕ್, ಸಿಂಡಿಕೇಟು ಸದಸ್ಯರು ಮತ್ತು ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರನ್ನೊಳಗೊಂಡ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:48(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಎಂಬಲ್ಲಿ ಸ್ನಾತಕೋತ್ತರ ಕೇಂದ್ರದ ದ್ವಿಪಥ ರಸ್ತೆಯನ್ನು ಸುಸಜ್ಜಿತ ಡಾಮಾರೀಕೃತ ರಸ್ತೆಯನ್ನಾಗಿ ಮಾಡುವ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:49(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯ ಅಧೀನಕ್ಕೊಳಪಟ್ಟ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿ ಪ್ರವೇಶ ದ್ವಾರ ನಿರ್ಮಿಸುವ ಕಾಮಗಾರಿ – ಅಂದಾಜುಪಟ್ಟಿ ಅನುಮೋದನೆ ಬಗ್ಗೆ.

ಅಂದಾಜು ಮೊತ್ತ ರೂ. 75.00 ಲಕ್ಷ

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಇಡಿ ಸಾ.ಸ5:50(2016)

**ವಿಷಯ :** Laying of bolders and gravel to the University Play Ground at Mangalore University Campus Mangalagangothri

ಅಂದಾಜು ಮೊತ್ತ ರೂ. 2,60,00,000.00

**ಸಭೆಯ ದಿನಾಂಕ: 30.07.2016**

**ನಿರ್ಣಯ :** ದಿನಾಂಕ 28.07.2016ರ ಕಟ್ಟಡ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಪರೀಕ್ಷಾಂಗ ಸಾ.ಸ5:51(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಅಂಚೆತೆರಪಿನ ಜುಲೈ 2016ರ ವಾರ್ಷಿಕ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ : ಎಸ್.ಎಸ್.ಬಿ.ಇ.ಟಿ., ಬೆಂಗಳೂರು ಸಂಸ್ಥೆಯ ಮುಖಾಂತರ ಪರೀಕ್ಷೆಗೆ ನೋಂದಾಯಿಸಿದ ಕೆಲವು ವಿದ್ಯಾರ್ಥಿಗಳು ಕಾರಣಾಂತರಗಳಿಂದ ಪರೀಕ್ಷೆ ಬರೆಯಲು ಸಾಧ್ಯಾವಾಗಿರದ ಕಾರಣ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಮರು ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲು ನಿರ್ಣಯಿಸಲಾಯಿತು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಮಗಳ ಪ್ರಕಾರವೇ ಪರೀಕ್ಷೆ ನಡೆಸುವಂತೆ ಸದರಿ ಸಂಸ್ಥೆಗೆ ಸೂಚಿಸಲು ನಿರ್ಧರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ5:52(2016)

**ವಿಷಯ :** ದೈಹಿಕ ಶಿಕ್ಷಣ ವಿಭಾಗದ ಕ್ರೀಡಾ ಮಾರ್ಗದರ್ಶಿ (Sports Guidelines) ಯನ್ನು ತಯಾರಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ5:53(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕ್ರೀಡಾ ನೀತಿ ಅನುಷ್ಠಾನಗೊಳಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಾರ್ವತ್ರಿಕ ಸಾ.ಸ5:54(2016)

**ವಿಷಯ :** ದೈಹಿಕ ಶಿಕ್ಷಣ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿಗೆ ಕಬಡ್ಡಿ ಮ್ಯಾಟ್ ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ : ದಿನಾಂಕ 26.07.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ5:55(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ‘‘ನೆಹರೂ ಚಿಂತನಾ ಕೇಂದ್ರ ಸ್ಥಾಪನೆ ಬಗ್ಗೆ ರಚಿಸಿದ ಕರಡು ಪರಿನಿಯಮವನ್ನು ಅನುಮೋದಿಸುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ5:56(2016)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ Adjunct Professors ನ್ನು ನೇಮಕಾತಿ ಮಾಡಿದ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:57(2016)

ವಿಷಯ : Manipal International University, Malaysia ಇಲ್ಲಿ ದಿನಾಂಕ 22.07.2016 ಮತ್ತು 23.07.2016 ರಂದು ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.

ಸಭೆಯ ದಿನಾಂಕ: **30.07.2016**

ನಿರ್ಣಯ : ಡಾ.ಸಿ.ಕೆ.ಹೆಬ್ಬಾರ್, ಸಹಪ್ರಾಧ್ಯಾಪಕರು, ಡಾ.ಯತೀಶ್ ಕುಮಾರ್, ಸಹ ಪ್ರಾಧ್ಯಾಪಕರು, ಜಯರಾಜ್ ಎನ್., ಸಹ ಪ್ರಾಧ್ಯಾಪಕರು, ಹಾಗೂ ಶ್ರೀಮತಿ ವನಜಾ, ಸಹಾಯಕ ಗ್ರಂಥಪಾಲಕಿ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿರುವುದಕ್ಕೆ ಘಟನೋತ್ತರ ಅನುಮತಿ ಮತ್ತು ದಿನಾಂಕ 20.07.2016 ರಿಂದ 25.07.2016ರವರೆಗೆ ಅಧಿಕೃತ ಕಾರ್ಯನಿಮಿತ್ತ ರಜೆ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:58(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ಕಾರ್ಯಕಾರಿ ಅಭಿಯಂತರರ ಕಚೇರಿಯಲ್ಲಿ ಕಾಮಗಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ದಿವಂಗತ ಶ್ರೀ ಲೋಕನಾಥ್ ಎಂ. ಇವರ ಮಗನಾದ ಶ್ರೀ ಕೃಷ್ಣಮೂರ್ತಿ, ಇವರನ್ನು ಅನುಕಂಪದ ಆಧಾರದಲ್ಲಿ ನೇಮಕ ಮಾಡುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:59(2016)

**ವಿಷಯ :** ಕು. ಗೀತಾ ಕೆ., ಶೀಘ್ರಲಿಪಿಗಾರರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕರ್ನಾಟಕ ಮಾಹಿತಿ ಆಯೋಗದಲ್ಲಿನ ಶೀಘ್ರಲಿಪಿಗಾರರ ಹುದ್ದೆಗೆ ನಿಯೋಜಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಕು. ಗೀತಾ ಕೆ., ಶೀಘ್ರಲಿಪಿಗಾರರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇವರ ಕೋರಿಕೆಯಂತೆ ಶೀಘ್ರಲಿಪಿಗಾರರ ಹುದ್ದೆಗೆ ಸದರಿಯವರ ರಜಾ ವೇತನ ಹಾಗೂ ಪಿಂಚಣಿ ವಂತಿಗೆ ಮೊತ್ತವನ್ನು ಸಂಬಂಧಪಟ್ಟ ಇಲಾಖೆಯವರು ಪಾವತಿಸುವ ಷರತ್ತಿಗೊಳಪಟ್ಟು ಎರಡು ವರ್ಷಗಳ ಅವಧಿಗೆ ನಿಯೋಜಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ5:60(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ / ಕಛೇರಿಗಳ ಕಂಪ್ಯೂಟರ್‌ಗಳಿಗೆ ಅಗತ್ಯವಿರುವ Microsoft Office Tools ಖರೀದಿಸುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** Microsoft office tools ಗಳನ್ನು DGS &D ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ5:61(2016)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಹೊಸ ವಾಹನಗಳ ಖರೀದಿಯ ಪ್ರಸ್ತಾವನೆ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ :** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ5:62(2016)

**ವಿಷಯ:** 2016–17ನೇ ಸಾಲಿನಲ್ಲಿ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿನ ಶುಚಿತ್ವ ಕಾರ್ಯದ ಗುತ್ತಿಗೆ ನೀಡುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ:** ದಿನಾಂಕ 26.07.2016ರ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಸಿಬ್ಬಂದಿ ಸಾ.ಸ5:63(2016)

**ವಿಷಯ:** ಡಾ.ವಹೀದಾ ಸುಲ್ತಾನ್, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಇವರಿಗೆ ದಿನಾಂಕ 27.10.2016 ರಿಂದ 29.10.2016ರ ವರೆಗೆ Yogyakarta Indonesia ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಪತ್ರಿಕೆ ಮಂಡಿಸುವ ಸಲುವಾಗಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 30.07.2016**

**ನಿರ್ಣಯ:** ಸದರಿಯವರಿಗೆ ದಿನಾಂಕ 24.10.2016 ರಿಂದ 28.10.2016ರ ವರೆಗೆ Yogyakarta Indonesia ನಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ Oral presentation ಮಾಡುವ ಸಲುವಾಗಿ ಭಾಗವಹಿಸಲು ಅನುಮತಿ ಹಾಗೂ ನಿಯಮಾನುಸಾರ ರೂ.60,000/– ಆರ್ಥಿಕ ಸಹಾಯದೊಂದಿಗೆ ಅಧಿಕೃತ ಕಾರ್ಯ ನಿಮಿತ್ತ ರಜಾ ಸೌಲಭ್ಯ ಮಂಜೂರು ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಸಮ್ಮೇಳನದ ಶೈಕ್ಷಣಿಕ ಉಪಯುಕ್ತತೆಯ ಬಗ್ಗೆ ಸದರಿಯವರು ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಆಡಳಿತ ಸಾ.ಸ5:64(2016)

**ವಿಷಯ:** ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗದವರಿಗೆ ಮೊಬೈಲ್ ಖರೀದಿಸಲು ಅನುಮತಿ ನೀಡುವ ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಮೊಬೈಲ್ ಖರೀದಿಸಲು ಪ್ರಸ್ತುತವಿರುವ ದರ ರೂ.5,000/- ವನ್ನು ರೂ.8,000/- ಕ್ಕೆ ನಿಗದಿಪಡಿಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ :** ಡಿಇವಿ ಸಾ.ಸ5:65(2016)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಮತ್ತು CSIR-CFTRI, Mysuru ಮಧ್ಯೆ ಮಾಡಿಕೊಳ್ಳುವ ಒಡಂಬಡಿಕೆ ಪತ್ರದ ತಾತ್ವಿಕ ಅನುಮೋದನೆ (approval in principle) ಬಗ್ಗೆ.

**ಸಭೆಯ ದಿನಾಂಕ: 30.07.2016**

ನಿರ್ಣಯ: ಕರಡು ಒಡಂಬಡಿಕೆಯನ್ನು ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನುಮುಕ್ತಾಯಗೊಳಿಸಿದರು.

ಕುಲಸಚಿವರು ಕುಲಪತಿಗಳು